**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 504/2015**

ಪಿಡಬ್ಲ್ಯೂ-14

**ದಿನಾಂಕ 31-10-2022 ರಂದು ಸಾಕ್ಷಿಯನ್ನು ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರಿ ಎಚ್ ಕೆ ಸಿ ವಕೀಲರಿಂದ ಆರೋಪಿಗಳ ಪರ ವಕೀಲರು**

ಚಾಸಾ 1 ಮತ್ತು 2 ರವರು ನನಗೆ ಬಾವ ಮತ್ತು ತಂಗಿ ಆಗಬೇಕು. ನಾನು ಸದರಿ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಸದರಿ ಗಲಾಟೆಯ ವಿಚಾರ ನನಗೆ ಚಾಸಾ 1 ರವರು ಘಟನಾ ನಡೆದ 2-3 ಗಂಟೆಯ ನಂತರ ತಿಳಿಸಿದರು. ಚಾಸಾ 1 ರವರು ನನಗಗೆ ಗಲಾಟೆ ವಿಚಾರವನ್ನು ಫೋನ್ ಮೂಲಕ ತಿಳಿಸಿದರು. ನನಗೆ ಈಗ ಸದರಿ ಫೋನ್ ನಂಬರ ಹೇಳಲಾಗುವುದಿಲ್ಲ.

ಆ ನಂತರ ನಾನು ಮೃತ ನಿಂಗಮ್ಮ ಅವರಿಗೆ ನಾನು ಘಟನಾ ನಡೆದ ದಿನದಂದು ನೋಡಿದ್ದು ಅವರಿಗೆ ನಡೆಯಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ . ಘಟನಾ ನಿಂಗಮ್ಮ ಇವರಿಗೆ ಸುಮಾರ 80 ವರ್ಷ ವಯಸ್ಸಾಗಿತ್ತು. ನಿಂಗಮ್ಮ ಅವರು ಸಹಜವಾಗಿ ನಡೆಯಬೇಕಾದರೆ ಇನ್ನೊಬರ ಸಹಾಯವನ್ನು ಪಡೆದೇ ನಡೆದಾಡುತ್ತಿದ್ದರು.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಪೋಲೀಸರು ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದು ಹೇಳಿದ್ದು ಆ ರೀತಿ ನಾನು ಯಾವ ದಿನಾಂಕದಂದು ನೀಡಿದ್ದೆನೆಂದು ಹೇಳಲಾಗುವುದಿಲ್ಲ. ಚಾಸಾ 1 ಮತ್ತು 2 ರವರು ಮೃತ ನಿಂಗಮ್ಮ ಇವರಿಗೆ ನಡೇದಾಡಲು ಎಂದು ಹೇಳಿ ತಮ್ಮ ಮನೆಯ ಹಿಂದಿನ ಶೆಡ್ ನಲ್ಲಿ ಇರಿಸಿದ್ದರು ಎಂದರೆ ಸರಿಯಲ್ಲ.

ಮೃತ ನಿಂಗಮ್ಮ ಇವರು ವಯಸ್ಸಾಗಿದ್ದರಿಂದ ಆಯಾ ತಪ್ಪಿ ಕೆಳಗೆ ಬಿದ್ದು ಗಾಯ ಮಾಡಿಕೊಂಡು ತೀರಿಕೊಂಡಿರುತ್ತಾರೆ ಅವರು ಆರೋಪಿಗಳು ಹಲ್ಲೆ ಮಾಡಿದ್ದರಿಂದ ತೀರಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನಿಂಗಮ್ಮ ಅವರಿಗೆ ಆಸ್ಪತ್ರೆಗೆ ಸೇರಿಸಿದ್ದರು ಎಂದು ನುಡಿಯುತ್ತಾರೆ. ಮೃತ ನಿಂಗಮ್ಮ ಇವರು ಒಳ ರೋಗಿಯಾಗಿ ಸುಮಾರು 3 ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

ಘಟನಾ ನಡೆದ ದಿನದಂದೇ ನಾವು ಮೃತ ದ ನಿಂಗಮ್ಮ ಇವರಿಗೆ ಚಾಸಾ 1 ರವರೊಂದಿಗೆ ಕೆ ಆರ್ ನಗರ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಮುಂದೆ ಚಾಸಾ 1 ರವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಆರೋಪಿಗಳು ನಾನು ಹೇಳಿದ ಹಾಗೆ ಮೃತ ನಿಂಗಮ್ಮ ಇವರಿಗೆ ಹೊಡೆದಿರುವುದಿಲ್ಲ ಎಂದರೆ ಸರಿ.

ನಾವು ಗಲಾಟೆಯಾದ ದಿನ ಮೃತ ನಿಂಗಮ್ಮ ಇವರಿಗೆ ಕೆ ಆರ್ ನಗರ ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾವು 1 ರಿಂದ 3 ನೇ ಆರೋಪಿಗಳ ವಿರುದ್ದ ದೂರು ನೀಡಬೇಕು ಎನ್ನುವ ದುರುದ್ದೇಶ ಇವರಿಗೆ ಮೃತ ನಿಂಗಮ್ಮ ಇವರಿಗೆ ಘಟನಾ ನಡೆದ 2 ದಿನದ ನಂತರ ಕೆ ಆರ್ ನಗರ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

ಘಟನಾ ದಿ 27.09.2014 ರಂದು ಆಗಿದ್ದು ನಾವು ನಿಂಗಮ್ಮ ಇವರಿಗೇ ದಿಃ 29.09.2014 ರಂದು ಕೆ ಆರ್ ನಗರ ಆಸ್ಪತ್ರೆಗೇ ಕರೆದುಕೊಂಡು ಹೋಗಿದ್ದು ಆ ದಿನ ನಿಂಗಮ್ಮಗೆ ತಪಾಸಣೆ ಮಾಡಿದ ವೈದ್ಯರು ಅವರ ಕಾಲು ಮುರಿದಿದೆ ಹಾಗಾಗಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂಬ ಸಲಹೆ ನೀಡಿದ್ದರು ಸಹ ನಿಂಗಮ್ಮ ಅವರು ನರಳಲಿ ಅಂತಾ ಹೇಳಿ ನಾವು ಅವರಿಗೆ ಕೆ ಆರ್ ಆಸ್ಪತ್ರೆ ಮೈಸೂರಿಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 1, ಮತ್ತು 2 ನನಗೆ ಸಂಬಂಧಿಕರಾಗಿದ್ದು, ಚಾಸಾ 1 ಹಾಗೂ 2 ಮತ್ತು ಆರೋಪಿಗಳ ನಡುವೆ ಜಾಗದ ವಿಚಾರವಾಗಿ ತಕರಾರು ಇದಿದ್ದರಿಂದ ನಾನು ಚಾಸಾ 1 ಮತ್ತು 2 ರ ಪರ ಅವರೊಂದಿಗೆ ಶಾಮೀಲಾಗಿ ಆರೋಾಪಿಗಳ ವಿರುದ್ದ ಶೇಡು ತೀರಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ